ಓ.ಎಸ್ ನಂ. 134/2021

ಪಿ. ಡಬ್ಲ್ಯೂಃ 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 10-06-2025 ರಂದು ಬೊಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜಿ ಪಿ ಟಿ ನ್ಯಾಯವಾದಿರವರಿಂದಃ**

ನಾನು ಕಂಪ್ಯೂಟರ ಸಾಯನ್ಸನಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಿರುತ್ತೇನೆ. ನನ್ನ ತಂದೆಯವರು ಬಜಾಜ ಆಟೋ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರಸ್ತುತ ನನ್ನ ತಂದೆ ಪೂಣೆಯಲ್ಲಿ ವಾಸವಾಗಿರುತ್ತಾರೆ. ಅವರು ಕಾರವಾರಕ್ಕೆ ಆಗಾಗ್ಗೆ ಬರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಅವಶ್ಯಕತೆ ಇದ್ದರೆ ಬರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ತಂದೆಯವರು 2021 ನೇ ಸಾಲಿನಲ್ಲಿ ಮೊಕ್ತಾರುನಾಮೆ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ. 2021 ರ ನಂತರ ನನ್ನ ತಂದೆಯು ವರ್ಷಕ್ಕೆ ಒಮ್ಮೆ ಅಥವಾ ಎರಡು ಬಾರಿ ಕಾರವಾರಕ್ಕೆ ಬರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ನನ್ನ ತಂದೆಗೆ ಹೃದಯ ಶಸ್ತ್ರ ಚಿಕಿತ್ಸೆ ಆಗಿದ್ದು , ಅವರಿಗೆ ಕಾರವಾರಕ್ಕೆ ಬಂದು ಹೋಗಲು ಕಷ್ಟ ಆಗುತ್ತಿದ್ದು , ತೀರಾ ಅನಿವಾರ್ಯ ಇದ್ದಲ್ಲಿ ಮಾತ್ರ ವೈದ್ಯರ ಅನುಮತಿ ಪಡೆದು ಕಾರವಾರಕ್ಕೆ ಬರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ಹಾಗೆ ಬರುವಾಗ ತಂದೆಯ ಜೊತೆ ಸಹಾಯಕರಾಗಿ ಯಾರಾದರೂ ಬರಬೇಕಾಗುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ನನ್ನ ತಂದೆಗೆ ಈ ದಾವೆಯನ್ನು ಖುದ್ದಾಗಿ ಬಂದು ನಡೆಸಲು ಹಾಗೂ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲಾ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯ ಬಗ್ಗೆ ಹಾಗೂ ನಮ್ಮ ಮತ್ತು ಪ್ರತಿವಾದಿಯರ ನಡುವಿನ ವಿವಾದವು ಈ ದಾವೆಯನ್ನು ಹೂಡಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ದಾವೆಯನ್ನು ಹೂಡುವ ಪೂರ್ವದಲ್ಲಿ ನನಗೆ ಕೆಲವೊಂದು ಮಾಹಿತಿಗಳಿದ್ದು , ದಾವೆಯನ್ನು ಹೂಡಿದ ನಂತರ ನನ್ನ ತಂದೆಯು ನನಗೆ ಎಲ್ಲಾ ಮಾಹಿತಿಗಳನ್ನು ವಿವರವಾಗಿ ತಿಳಿಸಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ಈ ದಾವೆಯನ್ನು ಹೂಡುವ ಸಲುವಾಗಿ ಮಾತ್ರ ನನಗೆ ನನ್ನ ತಂದೆ ಮೊಕ್ತಾರುನಾಮೆ ಪತ್ರವನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಎಲ್ಲಾ ಉದ್ದೇಶಕ್ಕಾಗಿ ಮೊಕ್ತಾರುನಾಮೆಯನ್ನು ನೀಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ಓ.ಎಸ್ ನಂ. 134/2021

ಪಿ. ಡಬ್ಲ್ಯೂ: 1

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು)

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಕಾರವಾರ